ಒ ಎಸ್ 206/2022 ಡಿ.ಡಬ್ಲ್ಯೂ:1

ಇಂದು ದಿಃ 24.03.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು 1ನೇ ಪ್ರತಿವಾದಿ ಹೇಮಾವತಿರವರ ಮಗ. ನನ್ನ ತಾಯಿ ನನಗೆ ಅಧಿಕಾರ ಪತ್ರ ಕೊಟ್ಟಿದ್ದಾರೆ. 2ನೇ ಪ್ರತಿವಾದಿ ನನಗೆ ಅಧಿಕಾರ ಪತ್ರ ಕೊಟ್ಟಿಲ್ಲ. ವಾದ ಪತ್ರ, ಪ್ರತಿವಾದ ಪತ್ರ ಹಾಗೂ ದಾಖಲೆಗಳನ್ನು ನಾನು ನೋಡಿದ್ದೇನೆ. ನಿಪಿ 3 ರ ಆರ್ ಟಿ ಸಿಯಲ್ಲಿ ಕೋಟಪ್ಪ ಎನ್ನುವವರ ಹೆಸರು 1982-83 ರಿಂದ 2004ರವರೆಗೆ ಇದೆ ಎಂದರೆ ನಮೂದಾಗಿದೆ ಎನ್ನುತ್ತಾರೆ. ಆ ನಮೂದಿನ ಅರ್ಥ ಕೋಟಪ್ಪ ರವರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದು ಅರ್ಥ ಎಂದರೆ ಸರಿಯಲ್ಲ. ರಾಮಚಂದ್ರು ರವರು 2002ರಲ್ಲಿ ಮೃತರಾದರು. 2006-07 ರಿಂದ 2014-15ರವರೆಗೆ ಕೋಟಪ್ಪ ಮತ್ತು ಆರ್ ಎಸ್ ರಾಮಚಂದ್ರುರವರ ಹೆಸರು ಜಂಟಿಯಾಗಿ ಆರ್ ಟಿ ಸಿ ಕಲಂ 12ರಲ್ಲಿ ನಮೂದು ಇದೆ ಎಂದರೆ ದಾಖಲೆಗಳು ಆ ರೀತಿ ಯಾಕೆ ಇದೆ ಎಂದು ನನಗೆ ಗೊತ್ತಿಲ್ಲ. ಆರ್ ಎಸ್ ರಾಮಚಂದ್ರುರವರು ಬದುಕಿಲ್ಲದ ಸಮಯದಲ್ಲಿ ಅವರ ಹೆಸರು ತಪ್ಪಾಗಿ ನಮೂದಾಗಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ.

ದಾವಾ ಆಸ್ತಿಗೆ ನಾವು ಕಂದಾಯ ಪಾವತಿ ಮಾಡಿದ್ದೇವೆ. ಕಂದಾಯ ಕಟ್ಟಿದ ಬಗ್ಗೆ, ಸ್ವಾಧೀನ ಇರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ಯಾವ ಕಾಲದಲ್ಲಿಯೂ ನಾವು ದಾವಾ ಆಸ್ತಿಯಲ್ಲಿ ಸ್ವಾಧೀನ ಇಲ್ಲದ ಕಾರಣಕ್ಕಾಗಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಕಳೆದ ವರ್ಷ ದಾವಾ ಆಸ್ತಿಯಲ್ಲಿ ಯಾವುದೇ ಬೆಳೆ ಬೆಳೆದಿಲ್ಲ. ವಾದಿಗಳು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡಿ ಬೆಳೆ ಬೆಳೆದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಒಟ್ಟು ಎಷ್ಟು ಪ್ಲಾಟುಗಳು ಇವೆ ಎಂದು ವಿಸ್ತಾರವಾಗಿ ಗೊತ್ತಿಲ್ಲ. ನಾನು ದಾವಾ ಆಸ್ತಿಯ ವ್ಯವಸಾಯದಲ್ಲಿ ಯಾವತ್ತೂ ಭಾಗಿಯಾಗಿಲ್ಲ. ಭೂ ನ್ಯಾಯ ಮಂಡಳಿಯ ಆದೇಶ ವಜಾ ಆದ ನಂತರ ವಾದಿಗಳೇ ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತುಂಬಾ ಹಿಂದೆ ನಾನು ದಾವಾ ಆಸ್ತಿಯ ಪ್ಲಾಟಿಗೆ ಹೋಗಿದ್ದೆ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.